ಕರ್ನಾಟಕ ಸರ್ಕಾರ
Government of Karnataka



# ನಮ್ಮ ದಸರಾ ಆನೆಗಳು 2026

# ಮಹೇಂದ್ರ

## ಬಳ್ಳೆ ಆನೆ ಶಿಬಿರ



ಕಳೆದ ಬಾರಿ ದಸರಾದಲ್ಲಿ ಸಾಲಾನೆಯಾಗಿ ಹಾಗೂ
ಶ್ರೀರಂಗಪಟ್ಟಣ ದಸರಾದಲ್ಲಿ ಮರದ ಅಂಬಾರಿಯನ್ನು ಹೊತ್ತು ಭಾಗವಹಿಸಿರುತ್ತದೆ.

ಲಿಂಗ : ಗಂಡು । ವಯಸ್ಸು : 42 ವರ್ಷಗಳು
ಶರೀರದ ಎತ್ತರ : 2.75 ಮೀ. । ಶರೀರದ ಉದ್ದ : 3.25 ಮೀ.
ಅಂದಾಜು ತೂಕ : 4764 ಕೆ.ಜಿ.

ಈ ಆನೆಯನ್ನು 2018ರಲ್ಲಿ ರಾಮನಗರದ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿ ಸೆರೆಹಿಡಿಯಿತು. ಶಾಂತ ಸ್ವಭಾವ, ಬಲಿಷ್ಠ ದೇಹ ಮತ್ತು ವೇಗವಾಗಿ ಪಳಗುವ ಶಕ್ತಿಯಿಂದ ಈ ಆನೆ ಶೀಘ್ರದಲ್ಲೇ ಅರಣ್ಯ ಇಲಾಖೆಯ ನಂಬಿಕಸ್ಥ ಆನೆಯಾಗಿ ಗುರುತಿಸಿಕೊಂಡಿರುತ್ತದೆ. 2022-23ನೇ ಸಾಲಿನಲ್ಲಿ ಮೊದಲ ಬಾರಿಗೆ ಮೈಸೂರು ದಸರಾ ಮಹೋತ್ಸವದಲ್ಲಿ ಸಾಲಾನೆಯಾಗಿ ಭಾಗವಹಿಸಿರುತ್ತದೆ. ಅದೇ ವರ್ಷ ಶ್ರೀರಂಗಪಟ್ಟಣದ ಗ್ರಾಮೀಣ ದಸರಾ ಉತ್ಸವದಲ್ಲಿ ಮರದ ಅಂಬಾರಿಯನ್ನು ಹೊರುವ ಗೌರವ ಲಭಿಸಿದ್ದು, ನಂತರವೂ ಹಲವಾರು ಗ್ರಾಮೀಣ ದಸರಾ ಉತ್ಸವಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದೆ. ಇದರ ಮತ್ತೊಂದು ಪ್ರಮುಖ ಪಾತ್ರವೆಂದರೆ, ಕಾಡಾನೆ ಮತ್ತು ಹುಲಿಗಳನ್ನು ಸೆರೆಹಿಡಿಯುವ ಅಪಾಯಕಾರಿ ಕಾರ್ಯಾಚರಣೆಗಳಲ್ಲಿ ಧೈರ್ಯವಂತಿಕೆ ಮತ್ತು ಶಿಸ್ತುಪೂರ್ಣ ನಡತೆಯಿಂದ ನೆರವೇರಿಸಿರುತ್ತದೆ. ಈ ಬಾರಿಯ ದಸರಾ ಮಹೋತ್ಸವದಲ್ಲಿಯೂ ಈ ಆನೆ ಸಕ್ರಿಯವಾಗಿ ಭಾಗವಹಿಸುತ್ತಿದೆ.



ರಾಜಣ್ಣ
ಮಾವುತ



ಮಲ್ಲಿಕಾರ್ಜುನ
ಕಾವಾಡಿ

# ಧನಂಜಯ

## ದುಬಾರೆ ಆನೆ ಶಿಬಿರ



ಕಳೆದ ಬಾರಿಯ ನಿಶಾನೆ ಆನೆ

ಲಿಂಗ : ಗಂಡು । ವಯಸ್ಸು : 45 ವರ್ಷಗಳು
ಶರೀರದ ಎತ್ತರ : 2.80 ಮೀ. । ಶರೀರದ ಉದ್ದ : 3.84 ಮೀ.
ಅಂದಾಜು ತೂಕ : 5280 ಕೆ.ಜಿ.

ಈ ಆನೆಯನ್ನು 2013ರಲ್ಲಿ ಹಾಸನ ಜಿಲ್ಲೆಯ ಯಸಳೂರು ವಲಯದ ಅರಣ್ಯ ಪ್ರದೇಶದಲ್ಲಿ ಸೆರೆಹಿಡಿಯಲಾಯಿತು. ಶಕ್ತಿಶಾಲಿ ದೇಹ ಹಾಗೂ ಶಿಸ್ತುಪೂರ್ಣ ನಡತೆಯೊಂದಿಗೆ ಈ ಆನೆಯು ಶೀಘ್ರದಲ್ಲೇ ಪಳಗಿ ತರಬೇತಿಗೊಂಡು, ಕಾಡಾನೆ ಮತ್ತು ಹುಲಿಗಳನ್ನು ಸೆರೆಹಿಡಿಯುವ ಪ್ರಮುಖ ಕಾರ್ಯಾಚರಣೆಗಳಲ್ಲಿ ಭಾಗವಹಿಸುತ್ತಿದೆ. ಇದು ಕಳೆದ ಎಂಟು ವರ್ಷಗಳಿಂದ ಮೈಸೂರಿನ ದಸರಾ ಮಹೋತ್ಸವದಲ್ಲಿ ನಿರಂತರವಾಗಿ ಪಾಲ್ಗೊಂಡು, ಶಾಂತವಾಗಿ ಮತ್ತು ದೃಢವಿಶ್ವಾಸದಿಂದ ನಡೆದುಕೊಂಡು ಜಾತ್ರೆಯ ಶೋಭೆಗೆ ವಿಶೇಷತೆ ಸೇರಿಸುತ್ತಿದೆ. ತನ್ನ ಶಕ್ತಿಶಾಲಿ ಸ್ವರೂಪದಿಂದ ಈ ಆನೆ ಈಗ ದಸರಾ ಆನೆಗಳ ಪೈಕಿ ಒಂದು ಮಹತ್ವಪೂರ್ಣ ಸ್ಥಾನವನ್ನು ಪಡೆದಿದೆ.



ಭಾಸ್ಕರ್ ಜೆ.ಸಿ
ಮಾವುತ



ರಾಜಣ್ಣ ಜೆ.ಎಸ್
ಕಾವಾಡಿ

# ಏಕಲವ್ಯ

## ಭೀಮನಕಟ್ಟೆ ಆನೆ ಶಿಬಿರ



ಕಳೆದ ಬಾರಿ ಸಾಲಾನೆಯಾಗಿ ಭಾಗವಹಿಸಿರುತ್ತದೆ

ಲಿಂಗ : ಗಂಡು । ವಯಸ್ಸು : 41 ವರ್ಷಗಳು
ಶರೀರದ ಎತ್ತರ : 2.88 ಮೀ. । ಶರೀರದ ಉದ್ದ : 2.95 ಮೀ.
ಅಂದಾಜು ತೂಕ : 5800 ಕೆ.ಜಿ.

ಈ ಆನೆಯನ್ನು 2022ರಲ್ಲಿ ಮೂಡಿಗೆರೆ ತಾಲ್ಲೂಕಿನ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆಯು ಯಶಸ್ವಿಯಾಗಿ ಸೆರೆಹಿಡಿಯಿತು. ಸೆರೆಹಿಡಿದ ನಂತರ, ಈ ಆನೆಯನ್ನು ತಕ್ಷಣವೇ ಪಳಗಿಸಲು ವಿಶೇಷ ತರಬೇತಿ ನೀಡಲಾಯಿತು. ಅಚ್ಚರಿಯೆಂದರೆ, ಈ ಆನೆ ಕೇವಲ ಒಂದೂವರೆ ವರ್ಷದಲ್ಲಿ ಅತ್ಯಂತ ಶಿಸ್ತಿನಿಂದ ಮತ್ತು ಶಾಂತ ನಡತೆಯಿಂದ ಪೂರ್ತಿಯಾಗಿ ಪಳಗಿ, ದಸರಾ ಮಹೋತ್ಸವದ ಸಾಲಾನೆಯಾಗಿ ಆಯೆಯಾಗಿರುವುದು. ಇದರ ಇನ್ನೊಂದು ವಿಶೇಷತೆ ಎಂದರೆ ವಾಹನಗಳ ಓಡಾಟದ ಶಬ್ದ ಅಥವಾ ಪಟಾಕಿಗಳ ಗದ್ದಲಕ್ಕೂ ಇದು ಅಂಜುವುದಿಲ್ಲ. ಶಾಂತ ಸ್ವಭಾವ, ಧೈರ್ಯ ಮತ್ತು ವೇಗದ ಪಳಗುವಿಕೆಯಿಂದಾಗಿ ಅರಣ್ಯಾಧಿಕಾರಿಗಳ ನಂಬಿಕೆಗೆ ಪಾತ್ರವಾಗಿದೆ. ಈಗ ಇದು ಮೂರನೇ ಬಾರಿಗೆ ದಸರಾದಲ್ಲಿ ಪಾಲ್ಗೊಳ್ಳುತ್ತಿದ್ದು, ಸೆರೆ ಹಿಡಿದ ಕಡಿಮೆ ಅವಧಿಯಲ್ಲಿ ದಸರಾ ಉತ್ಸವದಲ್ಲಿ ಭಾಗವಹಿಸುತ್ತಿರುವ ಹೆಗ್ಗಳಿಕೆಗೆ ಪಾತ್ರವಾಗಿದೆ.



ಇದಾಯತ್ ಎಸ್
ಮಾವುತ



ಪ್ರಸನ್ನ
ಕಾವಾಡಿ

# ಪ್ರಶಾಂತ

## ದುಬಾರೆ ಆನೆ ಶಿಬಿರ



ಕಳೆದ ಬಾರಿಯ ಸಾಲಾನೆಯಾಗಿ ಭಾಗವಹಿಸಿರುತ್ತದೆ

ಲಿಂಗ : ಗಂಡು । ವಯಸ್ಸು : 54 ವರ್ಷಗಳು
ಶರೀರದ ಎತ್ತರ : 2.61 ಮೀ. । ಶರೀರದ ಉದ್ದ: 3.46 ಮೀ.
ಅಂದಾಜು ತೂಕ : 5100 ಕೆ.ಜಿ.

ಈ ಆನೆಯನ್ನು 1993ರಲ್ಲಿ ಶಿವಮೊಗ್ಗ ಜಿಲ್ಲೆಯ ಕಾರೆಕೊಪ್ಪ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆಯು ಯಶಸ್ವಿಯಾಗಿ ಸೆರೆಹಿಡಿಯಿತು. ಪ್ರಬಲ ದೇಹ ಹಾಗೂ ಗಂಭೀರ ನಡವಳಿಕೆಯುಳ್ಳ ಈ ಆನೆಯನ್ನು ಶೀಘ್ರದಲ್ಲೇ ಪಳಗಿಸಿ ವಿಶಿಷ್ಟ ತರಬೇತಿಗೆ ಒಳಪಡಿಸಲಾಯಿತು. ಬಲಿಷ್ಠ ಹಾಗೂ ನಂಬಿಕಸ್ಥ ಆನೆಯಾಗಿ ಅರಣ್ಯ ಇಲಾಖೆಯ ವಿವಿಧ ಕಾರ್ಯಾಚರಣೆಗಳಲ್ಲಿ ಮೌಲ್ಯಯುತ ಸೇವೆ ಸಲ್ಲಿಸಿದೆ. ಈ ಆನೆಯು ಕಳೆದ 18 ವರ್ಷಗಳಿಂದ ಮೈಸೂರು ದಸರಾ ಮಹೋತ್ಸವದಲ್ಲಿ ನಿರಂತರವಾಗಿ ಭಾಗವಹಿಸುತ್ತಿದ್ದು, ಉತ್ಸವದ ಪ್ರಮುಖ ಆಕರ್ಷಣೆಯಾಗಿದೆ. ಅದರ ಶಿಸ್ತುಬದ್ಧ ನಡೆ, ಸತತ ಸೇವೆ ಮತ್ತು ಆಜ್ಞಾಪಾಲನೆಯು ಈ ಆನೆಯನ್ನು ದಸರಾ ಆನೆಗಳ ಪೈಕಿ ಅತ್ಯಂತ ನಂಬಿಕಸ್ಥ ಸದಸ್ಯನನ್ನಾಗಿ ಪರಿಗಣಿಸಿದೆ. ಈ ಆನೆಯು ತನ್ನ ಶಕ್ತಿಯುತ ಸ್ಥಿತಿಯಿಂದ ಭದ್ರತೆಗೆ ಸಹಕಾರಿಯಾಗಿರುತ್ತದೆ. ಪ್ರತಿ ದಸರಾ ಮೆರವಣಿಗೆಯಲ್ಲಿ ಇದೊಂದು ಶಾಂತಿಯುತ ಶಕ್ತಿಯ ಸಂಕೇತವಾಗಿ ಬೆಳಗುತ್ತದೆ. 3 ದಶಕಗಳ ಸೇವಾ ಪೈಪೋಟಿಯ ಜೊತೆಗೆ, ಈ ಆನೆ ಇಂದು ದಸರಾ ಪರಂಪರೆಯ ಜೀವಂತ ಚಿಹ್ನೆಯಾಗಿದೆ.




ಜೆ.ಎ. ಚಿನ್ನಪ್ಪ
ಮಾವುತ



ಚಂದ್ರ ಜೆ.ಹೆಚ್.
ಕಾವಾಡಿ

# ಗೋಪಿ

## ದುಬಾರೆ ಆನೆ ಶಿಬಿರ



ಕಳೆದ ಬಾರಿ ನೌಫತ್ ಆನೆಯಾಗಿ ಭಾಗವಹಿಸಿದೆ.

ಲಿಂಗ : ಗಂಡು । ವಯಸ್ಸು : 43 ವರ್ಷಗಳು
ಶರೀರದ ಎತ್ತರ : 2.50 ಮೀ. । ಶರೀರದ ಉದ್ದ : 3.42 ಮೀ.
ಅಂದಾಜು ತೂಕ : 5150 ಕೆ.ಜಿ.

ಈ ಆನೆಯನ್ನು 1993ರಲ್ಲಿ ಶಿವಮೊಗ್ಗ ಜಿಲ್ಲೆಯ ಕಾರೇಕೊಪ್ಪ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿ ಸೆರೆಹಿಡಿಯಿತು. ಬಳಿಕ ಈ ಆನೆಗೆ ದುಬಾರೆ ಆನೆ ಶಿಬಿರದಲ್ಲಿ ಶಿಸ್ತಿನ ತರಬೇತಿ ನೀಡಲಾಗಿದ್ದು, ಅಲ್ಲಿಯ ಸಫಾರಿ ಸೇವೆಯಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರವಾಸಿಗರ ಜೊತೆಗೆ ನಿಯಮಿತ ಸಂವಹನ ಹೊಂದುತ್ತಿರುವ ಕಾರಣದಿಂದಾಗಿ ಈ ಆನೆಗೆ ಮಾನವ ಸಂಪರ್ಕದ ಉತ್ತಮ ಪರಿಚಯವಿದೆ, ಜೊತೆಗೆ ಶಾಂತ, ನಿಯಂತ್ರಿತ ನಡವಳಿಕೆಯು ಇದರ ಪ್ರಮುಖ ಲಕ್ಷಣವಾಗಿದೆ. ಈ ಆನೆ ಕಳೆದ 15 ವರ್ಷಗಳಿಂದ ನಿರಂತರವಾಗಿ ಮೈಸೂರು ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದು, ಪ್ರತಿ ವರ್ಷವೂ ಶಿಸ್ತುಪೂರ್ಣವಾಗಿ ಮೆರವಣಿಗೆಯಲ್ಲಿ ನಡೆಯುವ ಮೂಲಕ ಎಲ್ಲರ ಗಮನ ಸೆಳೆಯುತ್ತಿದೆ. 2015 ರಿಂದ 2024 ರವರೆಗೆ ಈ ಆನೆಗೆ ಮತ್ತೊಂದು ಮಹತ್ವದ ಪಾತ್ರ ಅಂದರೆ – ಪಟ್ಟದ ಆನೆಯ ಜೊತೆ ನಿಶಾನೆ ಆನೆಯಾಗಿ ಅರಮನೆ ಆವರಣದಲ್ಲಿ ನಡೆಯುವ ಪೂಜಾ ವಿಧಿವಿಧಾನಗಳಲ್ಲಿ ಭಾಗವಹಿಸುವ ಗೌರವ ಲಭಿಸಿದೆ. ರಾಜದರ್ಶನ ಹಾಗೂ ಧಾರ್ಮಿಕ ವಿಧಿಗಳ ಸಂದರ್ಭಗಳಲ್ಲಿ ಇದು ಶಾಂತ ಮತ್ತು ಗಂಭೀರ ನಡವಳಿಕೆಯೊಂದಿಗೆ ಹಾಜರಿರುತ್ತದೆ. 2021ರಲ್ಲಿ ನಿಶಾನೆ ಆನೆಯಾಗಿ, ಇದರ ಶಿಸ್ತಿನ ನಡೆ, ದೈಹಿಕ ಸಾಮರ್ಥ್ಯ ಮತ್ತು ಅನುಭವದಿಂದ ಈ ಆನೆಯನ್ನು ಇಂದು ದಸರಾ ಉತ್ಸವದ ಪ್ರಮುಖ ಆನೆಗಳಲ್ಲಿ ಒಂದಾಗಿ ಪರಿಗಣಿಸಲಾಗುತ್ತಿದೆ. ಅರಣ್ಯವಾಸದಿಂದ ಅರಮನೆಯ ಪೂಜಾ ವೇದಿಕೆವರೆಗೆ ಈ ಆನೆಯ ಪಯಣ ಒಂದು ಯಶೋಗಾಥೆಯಾಗಿದೆ.



ಪಿ.ಬಿ. ನವೀನ್ ಕುಮಾರ್
ಮಾವುತ



ಶಿವು ಜೆ.ಆರ್
ಕಾವಾಡಿ

# ಶ್ರೀರಾಮ

## ದುಬಾರೆ ಆನೆ ಶಿಬಿರ



ಕೆಲವು ವರ್ಷಗಳ ನಂತರ ಮತ್ತೆ ಆಯ್ಕೆಯಾಗಿದೆ

ಲಿಂಗ : ಗಂಡು । ವಯಸ್ಸು : 41 ವರ್ಷಗಳು
ಶರೀರದ ಎತ್ತರ : 2.68 ಮೀ. । ಶರೀರದ ಉದ್ದ : 3.20 ಮೀ.
ಅಂದಾಜು ತೂಕ : 4640 ಕೆ.ಜಿ.

ಈ ಆನೆಯನ್ನು 2016 ರಲ್ಲಿ ಕೊಡಗಿನ ಬನಂಗೋಹ ಬಾಡಗ ಬಳಿ ಸೆರೆಹಿಡಿಯಲಾಗಿರುತ್ತದೆ. ಸದರಿ ಆನೆಯು ಈ ಹಿಂದೆ 4 ಬಾರಿ ಹಾಗೂ ಕಳೆದ ಬಾರಿ ಸೇರಿ ಒಟ್ಟು 5 ಬಾರಿಗೆ ದಸರಾ ಮಹೋತ್ಸವದಲ್ಲಿ ಭಾಗವಹಿಸಿರುತ್ತದೆ. ಅಲ್ಲದೇ ಒಂದು ವರ್ಷ ತುಮಕೂರು ದಸರಾ ಮಹೋತ್ಸವದಲ್ಲಿಯೂ ಕೂಡ ಭಾಗವಹಿಸಿರುತ್ತದೆ.



ಸರಿ ಜೆ. ಡಿ.
ಮಾವುತ



ಗಣೇಶ
ಕಾವಾಡಿ

# ಶ್ರೀಕಂಠ

## ಮತ್ತಿಗೋಡು ಆನೆ ಶಿಬಿರ



ಕಳೆದ ಬಾರಿ ಅರಮನೆ ಪಟ್ಟದಾನೆಯಾಗಿ ಕರ್ತವ್ಯ ನಿರ್ವಹಿಸಿರುತ್ತದೆ.

ಲಿಂಗ : ಗಂಡು । ವಯಸ್ಸು : 57 ವರ್ಷಗಳು
ಶರೀರದ ಎತ್ತರ : 2.86 ಮೀ. । ಶರೀರದ ಉದ್ದ : 3.25 ಮೀ.
ಅಂದಾಜು ತೂಕ : 5860 ಕೆ.ಜಿ.

ಈ ಆನೆಯನ್ನು 2014ರಲ್ಲಿ ಹಾಸನ ವಿಭಾಗದ ಶನಿವಾರಸಂತೆ ವಲಯದ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆಯ ತಂಡದ ಮೂಲಕ ಸುರಕ್ಷಿತವಾಗಿ ಸೆರೆಹಿಡಿಯಲಾಗಿತ್ತು. ಸಾಧಾರಣ ಎತ್ತರ, ಬಲಿಷ್ಠ ಶರೀರ, ಶಾಂತ ಸ್ವಭಾವ ಮತ್ತು ಮನುಷ್ಯರೊಂದಿಗೆ ಸುಲಭವಾಗಿ ಹೊಂದಿಕೆಯಾಗುವ ಗುಣಗಳಿರುವ ಈ ಆನೆ ಇದೀಗ ಮೈಸೂರು ದಸರಾ ಮಹೋತ್ಸವದಲ್ಲಿ ಎರಡನೇ ಬಾರಿಗೆ ಭಾಗವಹಿಸುತ್ತಿದೆ.



ಜೆ.ಆರ್. ರಾಧಕೃಷ್ಣ
ಮಾವುತ



ಓಂಕಾರ್ ಕೆ.
ಕಾವಾಡಿ

# ಲಕ್ಷ್ಮಿ

## ಬಳ್ಳೆ ಆನೆ ಶಿಬಿರ



ಕಳೆದ ಬಾರಿ ಕುಮ್ಕಿ ಆನೆಯಾಗಿ ಭಾಗವಹಿಸಿದೆ

ಲಿಂಗ : ಹೆಣ್ಣು । ವಯಸ್ಸು : 54 ವರ್ಷಗಳು
ಶರೀರದ ಎತ್ತರ : 2.52 ಮೀ. । ಶರೀರದ ಉದ್ದ : 3.20 ಮೀ.
ಅಂದಾಜು ತೂಕ : 3438 ಕೆ.ಜಿ.

ಈ ಆನೆ ಹಿಂದೆ ಸರ್ಕಸ್‌ಗಾಗಿ ಬಳಸಲಾಗುತ್ತಿದ್ದು, ಮಾನವ ಸಂಪರ್ಕಕ್ಕೆ ನಿಕಟವಾಗಿರುವುದರಿಂದ ಹಲವಾರು ಶಬ್ಧಗಳು ಹಾಗೂ ಜನಜಂಗುಳಿ ಇದಕ್ಕೆ ಪರಿಚಿತವಾಗಿತ್ತು. 2015ರಲ್ಲಿ ಅರಣ್ಯ ಇಲಾಖೆ ಈ ಆನೆಯನ್ನು ತನ್ನ ವಶಕ್ಕೆ ತೆಗೆದುಕೊಂಡು, ಪೂರಕ ಆರೈಕೆ ಮತ್ತು ಪಳಗಿಸುವಿಕೆಯ ಮೂಲಕ ನೈಸರ್ಗಿಕ ಪರಿಸರಕ್ಕೆ ಹೊಂದಿಕೊಳ್ಳುವಂತೆ ಯಶಸ್ವಿಯಾಗಿ ತರಬೇತಿ ನೀಡಿತು. ಇಂದಿಗೆ ಈ ಆನೆ ಸಂಪೂರ್ಣ ಆರೋಗ್ಯವಾಗಿದ್ದು, ವಾಹನಗಳ ಸದ್ದು ಅಥವಾ ಪಟಾಕಿಗಳ ಗದ್ದಲಕ್ಕೂ ಅಂಜದೆ ನಿಶ್ಚಲವಾಗಿ ನಿಲ್ಲುವ ಶಾಂತ ಸ್ವಭಾವ ಹೊಂದಿದೆ. ಈ ಶಿಸ್ತು, ಧೈರ್ಯ ಮತ್ತು ಸಹನೆ ಅದರ ಪ್ರಮುಖ ಗುಣಲಕ್ಷಣಗಳಾಗಿವೆ. ಈ ಆನೆ ಈಗ ಮೂರನೇ ಬಾರಿಗೆ ಮೈಸೂರು ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದು, ದಸರಾ ಮೆರವಣಿಗೆಯ ಶೋಭೆಗೆ ತನ್ನ ಶಾಂತ ನಡತೆ ಹಾಗೂ ಶಕ್ತಿಯುತ ಸಾಮರ್ಥ್ಯದಿಂದ ಮೆರುಗು ನೀಡುತ್ತಿದೆ. ಇತ್ತೀಚಿನ ದಸರಾ ಉತ್ಸವಗಳಲ್ಲಿ ಅರಣ್ಯ ಇಲಾಖೆಯ ನಂಬಿಕಸ್ಥ ಆನೆ ಎಂಬ ಸ್ಥಾನವನ್ನು ಇದು ಸಂಪಾದಿಸಿದೆ.



ಮಹೇಶ
ಮಾವುತ



ಮಧು ಎಸ್.
ಕಾವಾಡಿ

# ಕಾವೇರಿ

## ದುಬಾರೆ ಆನೆ ಶಿಬಿರ



ಕಳೆದ ಹಲವು ದಸರಾಗಳಲ್ಲಿ ಕುಮ್ಕಿ ಆನೆಯಾಗಿ ಭಾಗವಹಿಸಿದೆ

ಲಿಂಗ : ಹೆಣ್ಣು । ವಯಸ್ಸು : 46 ವರ್ಷಗಳು
ಶರೀರದ ಎತ್ತರ : 2.40 ಮೀ. । ಶರೀರದ ಉದ್ದ : 3.32 ಮೀ.
ಅಂದಾಜು ತೂಕ : 3060 ಕೆ.ಜಿ.

ಈ ಆನೆಯನ್ನು ಫೆಬ್ರವರಿ 2009ರಂದು ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಆಡಿನಾಡೂರು ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿ ಸೆರೆಹಿಡಿಯಿತು. ಈ ಆನೆ ಕಳೆದ ಹಲವಾರು ದಸರಾ ಮಹೋತ್ಸವಗಳಲ್ಲಿ ಭಾಗವಹಿಸಿತು ಮತ್ತು ತನ್ನ ಶಿಸ್ತು, ಶಾಂತ ನಡವಳಿಕೆಯಿಂದಾಗಿ ಎಲ್ಲಾ ಬಾರಿ ಗಮನ ಸೆಳೆಯಿತು. ಪ್ರಸ್ತುತ ಸಾಲಿನಲ್ಲಿ ಮೈಸೂರು ದಸರಾ ಮಹೋತ್ಸವದಲ್ಲಿ ಭಾಗವಹಿಸುವ ಉದ್ದೇಶದಿಂದ ಈ ಆನೆಯನ್ನು ಪುನಃ ಆಯ್ಕೆ ಮಾಡಲಾಗಿದೆ.



ಜೆ.ಡಿ. ದೋಬಿ
ಮಾವುತ



ಸಂಜನ್ ಜೆ.ಎ.
ಕಾವಾಡಿ

# ರೂಪ

## ದೊಡ್ಡಹರವೆ ಆನೆ ಶಿಬಿರ



ಕಳೆದ ಬಾರಿ ಕುಮ್ಕಿ ಆನೆಯಾಗಿ ಭಾಗವಹಿಸಿದೆ

ಲಿಂಗ : ಹೆಣ್ಣು । ವಯಸ್ಸು : 50 ವರ್ಷಗಳು

ಶರೀರದ ಎತ್ತರ : 2.75 ಮೀ. । ಶರೀರದ ಉದ್ದ : 2.90 ಮೀ.

ಅಂದಾಜು ತೂಕ : 3500 ಕೆ.ಜಿ.

ಈ ಆನೆಯನ್ನು 2016ರಲ್ಲಿ ಪ್ರಕೃತಿ ವಿರೋಧಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಒಂದು ಸರ್ಕಸ್ ಕಂಪನಿಯಿಂದ ರಕ್ಷಿಸಿ, ಅರಣ್ಯ ಇಲಾಖೆಯವರು ಆನೆಶಿಬಿರಕ್ಕೆ ಸ್ಥಳಾಂತರಿಸಿದರು. ಇದರಿಂದ ಆನೆಗೆ ಉತ್ತಮ ಆರೈಕೆ, ಆಹಾರ ಮತ್ತು ಆರಾಮದಾಯಕ ವಾತಾವರಣ ಲಭಿಸಿತು. ಶಿಬಿರದಲ್ಲಿ ಅನುಭವಿಸಿದ ಸಂಭಾಳನೆ ಹಾಗೂ ತರಬೇತಿಯಿಂದ ಆನೆಯು ಶಾಂತ ಮತ್ತು ಮನುಷ್ಯರೊಂದಿಗೆ ಸಹಜವಾಗಿ ಹೊಂದಿಕೊಳ್ಳುವ ಗುಣಗಳನ್ನು ಮೆರೆದಿತು. ಈ ಗುಣಾತ್ಮಕ ವೈಶಿಷ್ಟ್ಯಗಳನ್ನು ಗಮನದಲ್ಲಿ ಇಟ್ಟುಕೊಂಡು, ಈ ಆನೆಗೆ ಈ ಬಾರಿ ಮೈಸೂರು ದಸರಾ ಮಹೋತ್ಸವದಲ್ಲಿ ಎರಡನೇ ಬಾರಿಗೆ ಭಾಗವಹಿಸುವ ಅವಕಾಶ ದೊರೆತಿದ್ದು, ಇದು ಆನೆಗೆ ಹಾಗೂ ಶಿಬಿರದ ಸಿಬ್ಬಂದಿಗೆ ಹೆಮ್ಮೆಯ ಕ್ಷಣವಾಗಿದೆ.



**ಮಂಜುನಾಥ**
ಮಾವುತ



**ಮಂಜು**
ಕಾವಾಡಿ

# ಸುಗ್ರೀವ

## ದುಬಾರೆ ಆನೆ ಶಿಬಿರ



ಕಳೆದ ಬಾರಿ ಸಾಲಾನೆಯಾಗಿ ಭಾಗವಹಿಸಿದೆ.

ಲಿಂಗ : ಗಂಡು । ವಯಸ್ಸು : 44 ವರ್ಷಗಳು

ಶರೀರದ ಎತ್ತರ : 2.95 ಮೀ. । ಶರೀರದ ಉದ್ದ : 3.25 ಮೀ.

ಅಂದಾಜು ತೂಕ : 5800 ಕೆ.ಜಿ.

ಈ ಆನೆಯನ್ನು 2016ರಲ್ಲಿ ಕೊಡಗು ಜಿಲ್ಲೆಯ ಕುಶಾಲನಗರ ಅರಣ್ಯ ವಲಯದಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿ ಸೆರೆಹಿಡಿಯಿತು. ಸೆರೆಹಿಡಿದ ನಂತರ, ಈ ಆನೆಯನ್ನು ಸುಸೂತ್ರವಾಗಿ ಪಳಗಿಸಿ ತರಬೇತಿ ನೀಡಲಾಯಿತು. ಪ್ರಸ್ತುತ ಈ ಆನೆ ಸಂಪೂರ್ಣ ಆರೋಗ್ಯದಲ್ಲಿದ್ದು, ಶಾಂತ ಸ್ವಭಾವ, ಶಿಸ್ತುಪೂರ್ಣ ನಡೆ ಹಾಗೂ ಉತ್ತಮ ಆಜ್ಞಾಪಾಲನೆಯೊಂದಿಗೆ ಅರಣ್ಯ ಇಲಾಖೆಯ ನಂಬಿಕಸ್ಥ ಆನೆಯಾಗಿ ಗುರುತಿಸಲಾಗಿದೆ. ಈ ಆನೆ ಕಳೆದ ಮೂರು ಬಾರಿ ಮೈಸೂರು ದಸರಾ ಮಹೋತ್ಸವದಲ್ಲಿ ಯಶಸ್ವಿಯಾಗಿ ಭಾಗವಹಿಸಿ, ಮೆರವಣಿಗೆಯಲ್ಲಿ ತನ್ನ ಶಕ್ತಿಯುತ ಹಾಗೂ ಸ್ಥಿರ ನಡವಳಿಕೆಯಿಂದ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಜನಸಂದಣಿಯ ನಡುವೆಯೂ ಶಾಂತವಾಗಿ ನಡೆದು, ಎಲ್ಲಾ ಶಬ್ದಗಳಿಗೂ ತಟ್ಟನೆ ಪ್ರತಿಕ್ರಿಯಿಸುವ ಧೈರ್ಯ ಈ ಆನೆಯ ಬಲವಾಗಿದೆ. ಈ ಬಾರಿಯ ದಸರಾ ಮಹೋತ್ಸವದಲ್ಲಿಯೂ ಈ ಆನೆ ಸಕ್ರಿಯವಾಗಿ ಭಾಗವಹಿಸುತ್ತಿದ್ದು, ತನ್ನ ಅನುಭವ ಮತ್ತು ಶಿಸ್ತು ಮೂಲಕ ಜಾತ್ರೆಯ ಭವ್ಯತೆಗೆ ಮತ್ತಷ್ಟು ಮೆರುಗು ನೀಡಲಿದೆ. ಅರಣ್ಯವಾಸದಿಂದ ಅರಮನೆಯವರೆಗಿನ ಈ ಆನೆಯ ಪಯಣ ಪ್ರತಿ ಹೆಜ್ಜೆಯಲ್ಲೂ ಸಂಯಮ ಮತ್ತು ಶ್ರದ್ಧೆಯ ಸಂಕೇತವಾಗಿಯೇ ಬಿಂಬಿಸುತ್ತದೆ.




ಜೆ.ಜಿ ಶಂಕರ್
ಮಾವುತ



ಜೀವನ್
ಕಾವಾಡಿ

# ಚೈತ್ರ

## ರಾಮಪುರ ಆನೆ ಶಿಬಿರ



5 ಬಾರಿ ದಸರಾ ಮಹೋತ್ಸವದಲ್ಲಿ ಕುಮ್ಕಿ ಆನೆಯಾಗಿ
ಭಾಗವಹಿಸಿದ್ದು, ಈಗ ಪುನಃ ಆಯ್ಕೆಯಾಗಿದೆ.

ಲಿಂಗ : ಹೆಣ್ಣು । ವಯಸ್ಸು : 55 ವರ್ಷಗಳು
ಶರೀರದ ಎತ್ತರ : 2.47 ಮೀ. । ಶರೀರದ ಉದ್ದ : 2.80 ಮೀ.
ಅಂದಾಜು ತೂಕ : 2988 ಕೆ.ಜಿ.

ಈ ಆನೆಯು ಶಾಂತ ಸ್ವಭಾವದಾಗಿದ್ದು, ಇಲಾಖಾ ಆನೆ ಶಿಬಿರದಲ್ಲಿದ್ದ ಹುಟ್ಟಿ-ಬೆಳೆದ ಆನೆಯಾಗಿದ್ದು, ಈ ಆನೆ ಸಂಪೂರ್ಣ ಆರೋಗ್ಯವಾಗಿದ್ದು, ವಾಹನಗಳ ಸದ್ದು ಅಥವಾ ಪಟಾಕಿಗಳ ಗದ್ದಲಕ್ಕೂ ಅಂಜದೆ ನಿಶ್ಚಲವಾಗಿ ನಿಲ್ಲುವ ಶಾಂತ ಸ್ವಭಾವ ಹೊಂದಿದೆ.
ಈ ಶಿಸ್ತು, ಧೈರ್ಯ ಮತ್ತು ಸಹನೆ ಅದರ ಪ್ರಮುಖ ಗುಣಲಕ್ಷಣಗಳಾಗಿವೆ.
5 ಬಾರಿ ದಸರಾ ಮಹೋತ್ಸವದಲ್ಲಿ ಭಾಗವಹಿಸಿರುತ್ತದೆ.
ಈ ಆನೆ ಈಗ ಪುನಃ ಆಯ್ಕೆಯಾಗಿ, ಮೈಸೂರು ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದು, ದಸರಾ ಮೆರವಣಿಗೆಯ ಶೋಭೆಗೆ ತನ್ನ ಶಾಂತ ಹಾಗೂ ಶಕ್ತಿಯುತ ನಡತೆಯಿಂದ ಮೆರಗು ನೀಡುತ್ತಿದೆ.



ಕಲೀಂ ಪಾಷಾ
ಮಾವುತ



ಪ್ರತಾಪ್
ಕಾವಾಡಿ